## ಕರ್ನಾಟಕ ಅರಣ್ಯ ಇಲಾಖೆ

ಸಂಖ್ಯೆ:ಎ7/ಎಲ್‌ಎನ್‌ಡಿ/ಅ(ಸಂ)ಪ್ರ/ಬಿಜಿಎಂ/ಎನ್‌ಕೆಜಿ/ಸಿಆರ್– /2020–21

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ
ಬೆಳಗಾವಿ ವೃತ್ತ, ಬೆಳಗಾವಿ
ದಿನಾಂಕ: 25-11-2021

ಇವರಿಗೆ,

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬೆಳಗಾವಿ ವಿಭಾಗ,
ಬೆಳಗಾವಿ.

ವಿಷಯ: Construction of Foot Bridge across a local Nala on alternative pathway connecting from Nersa cillage to Kongala and Gavali village in Khanapur taluka.

ಉಲ್ಲೇಖ: ನಿಮ್ಮ ಕಛೇರಿ ಪತ್ರ ಸಂಖ್ಯೆ: ಡಿ1/ಲ್ಯಾಂಡ್/ಎಫ್.ಸಿ–40060/ಸಿಆರ್–07/2020–21/ ದಿನಾಂಕ: 10–11–2021.

** * **

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಡಿಯಲ್ಲಿ ಸಲ್ಲಿಸಿರುವ ಆನ್‌ಲೈನ್ ಪ್ರಸ್ತಾವಣೆಯನ್ನು ಹಾಗೂ ಯೋಜನೆಯ ಹಾರ್ಡ್ ಪ್ರತಿಯನ್ನು ಪರಿಶೀಲಿಸಿದ್ದು, ಉಪ ಅರಣ್ಯ ಸಂರಕ್ಷಣಾಧಿಕಾರಿ, ಪರಿವೇಶ ಲಾಗಿನ್‌ನ ಪಾರ್ಟ–2 ರಲ್ಲಿ ಉಲ್ಲೇಖಿಸಿರುವ ಷರಾಗಳು ಯೋಜನೆಯ ಹಾರ್ಡ್ ಪ್ರತಿಯಲ್ಲಿ ವರದಿಸಿರುವ ಷರಾಗಳು ತದ್ವಿರುದ್ಧವಾಗಿದ್ದು, ಈ ಕೆಳಗಿನಂತೆ ನ್ಯೂನ್ಯತೆಗಳು ಕಂಡುಬಂದಿರುತ್ತವೆ.

| ಅ. ನಂ. | ನ್ಯೂನ್ಯತೆಗಳು | ಪರಿವೇಶ ತಂತ್ರಾಂಶದಲ್ಲಿ ಉಲ್ಲೇಖಿಸಿರುವ ಷರಾ | ಹಾರ್ಡ್ ಪ್ರತಿಯಲ್ಲಿ ವರದಿಸಿರುವ ಷರಾ |
|---|---|---|---|
| 1 | 2 | 3 | 4 |
| 1 | ಪ್ರಸ್ತಾಪಿತ ಅರಣ್ಯ ಪ್ರದೇಶವು ಆನೆ ಕಾರಿಡಾರ ಪ್ರದೇಶದಲ್ಲಿ ಬರುವುದಿಲ್ಲವೆಂದು ತಿಳಿಸಿರುತ್ತೀರಿ, ಆದರೆ ನೆರಸಾ ಅರಣ್ಯ ಪ್ರದೇಶವು ಆನೆ ಕಾರಿಡಾರ ಪ್ರದೇಶದಲ್ಲಿ ಬರುತ್ತದೆ. | ಆನೆ ಕಾರಿಡಾರ ಪ್ರದೇಶದ ವ್ಯಾಪ್ತಿಗೆ ಒಳಪಡುವುದಿಲ್ಲ. | ಆನೆ ಕಾರಿಡಾರ ಪ್ರದೇಶದ ವ್ಯಾಪ್ತಿಗೆ ಒಳಪಡುತ್ತದೆ |
| 2 | ಪ್ರಸ್ತಾಪಿತ ಅರಣ್ಯ ಪ್ರದೇಶವು ಭೀಮಗಡ ವನ್ಯಜೀವಿ ಧಾಮದ ಸೂಕ್ಷ್ಮ ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು ತಿಳಿಸಿರುತ್ತೀರಿ, ಆದರೆ ಸದರ ವನ್ಯಜೀವಿ ಧಾಮದ ಸೂತ್ತಲು 10 ಕಿ.ಮೀ ವ್ಯಾಪ್ತಿ ಮಾನ್ಯ ಸರ್ವೋಚ್ಛ ನ್ಯಾಯಾಲಯ ಆದೇಶದ ಪ್ರಕಾರ ಸೂಕ್ಷ್ಮ ಅರಣ್ಯ ಪ್ರದೇಶವೆಂದು ಪರಿಗಣಿಸಲಾಗಿರುತ್ತದೆ. ಈ ಬಗ್ಗೆ ಪ್ರಸ್ತಾವನೆಯನ್ನು ಮರು ಪರಿಶೀಲಿಸುವುದು. | ಭೀಮಗಡ ವನ್ಯಜೀವಿ ಧಾಮದ ಸೂಕ್ಷ್ಮ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಬರುವುದಿಲ್ಲ | ಭೀಮಗಡ ವನ್ಯಜೀವಿ ಧಾಮದ ಸೂಕ್ಷ್ಮ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಬರುತ್ತದೆ. |

ಮುಂದುವರೆದು, ಜಿಲ್ಲಾಧಿಕಾರಿಗಳಿಂದ ಸದರಿ ಕಾಮಗಾರಿಗೆ ಅರಣ್ಯ ಪ್ರದೇಶ ಹೊರತುಪಡಿಸಿ ಅರಣ್ಯೇತರ ಪ್ರದೇಶ ಇಲ್ಲದೇ ಇರುವ ಬಗ್ಗೆ ಪ್ರಮಾಣ ಪತ್ರ ಪಡೆದು ಸಲ್ಲಿಸಿದ್ದು ಇರುವುದಿಲ್ಲ. ಇದರಿಂದ ಸದರ ಪ್ರಸ್ತಾವನೆಯನ್ನು ಮೇಲಾಧಿಕಾರಿಗಳಿಗೆ ಸಲ್ಲಿಸಲು ಸಾಧ್ಯವಾಗುತ್ತಿಲ್ಲ. ಅಲ್ಲದೇ ಸದರಿ ಪ್ರಸ್ತಾವನೆಯನ್ನು ಖಾನಾಪೂರ ಮತಕ್ಷೇತ್ರದ ಶಾಸಕರು ಆಧ್ಯತೆ ಮೇಲೆ ಪರಿಶೀಲಿಸುತ್ತಿದ್ದು, ಕಾರಣ, ಸದರಿ ಪ್ರಸ್ತಾವನೆಯನ್ನು ಕೂಲಂಕುಶವಾಗಿ ಪರಿಶೀಲಿಸಿ ಈ ಮೇಲ್ಕಾಣಿಸಿದ ನ್ಯೂನ್ಯತೆಗಳನ್ನು ಸರಿಪಡಿಸಿ ಮಾನ್ಯ ಜಿಲ್ಲಾಧಿಕಾರಿಗಳಿಂದ ಪ್ರಮಾಣ ಪತ್ರ ಪಡೆದು ಸಲ್ಲಿಸಲು ಸೂಚಿಸುತ್ತಾ, ಉಲ್ಲೇಖಿತ ಪತ್ರದಡಿ ಸಲ್ಲಿಸಿರುವ 4 ಪ್ರತಿಯ ಪ್ರಸ್ತಾವನೆಯನ್ನು ಈ ಪತ್ರಕ್ಕೆ ಲಗತ್ತಿಟ್ಟು ಮರಳಿಸಲಾಗಿದೆ.

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
ಬೆಳಗಾವಿ ವೃತ್ತ, ಬೆಳಗಾವಿ.